ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ, ಬೆಳಗಾವಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿ, ಬೆಳಗಾವಿ
ಫೋ.ನಂ: 0831-2407241 ಫ್ಯಾಕ್ಸ್ :0831-2407242 E-mail : dhobelgaum@gmail.com

ಸಂ/ಜಿ.ಕು.ಕ.ಅ/ಜಿ.ಖಾ.ಗು.ಫ/56/2022-23 ದಿನಾಂಕ:-02/09/2022

# ಜಿಲ್ಲಾ ಮಟ್ಟದ ಜೀವ ವೈದ್ಯಕೀಯ ತ್ಯಾಜ್ಯ ವಿಲೇವಾರಿ ಸಲಹಾ ಹಾಗೂ ಮೇಲ್ವಿಚಾರಣಾ ಸಮಿತಿ ಸಭೆಯ ನಡುವಳಿಗಳು

ದಿನಾಂಕ: 02.09.2022 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಜೀವ ವೈದ್ಯಕೀಯ ತ್ಯಾಜ್ಯ ವಿಲೇವಾರಿ ಸಲಹಾ ಹಾಗೂ ಮೇಲ್ವಿಚಾರಣಾ ಸಮಿತಿ ಸಭೆಯು ಜಿಲ್ಲಾ ಆರೋಗ್ಯ ಮತ್ತು ಕು.ಕ ಕಛೇರಿಯ ಸಭಾಂಗಣ, ಬೆಳಗಾವಿಯಲ್ಲಿ ಜರುಗಿತು. ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ಆರೋಗ್ಯಾಧಿಕಾರಿಗಳು, ಮಹಾನಗರ ಪಾಲಿಕೆ ಬೆಳಗಾವಿ, ಪರಿಸರ ಅಧಿಕಾರಿಗಳು ಬೆಳಗಾವಿ ಹಾಗೂ ಚಿಕ್ಕೋಡಿ, ಐ.ಎಮ್.ಎ ಅಧ್ಯಕ್ಷರು ಬೆಳಗಾವಿ, ಅಧ್ಯಕ್ಷರು, ಪ್ಯಾಸ್ ಪೌಂಡೇಶನ್ ಬೆಳಗಾವಿ, ಜೀವ ವೈದ್ಯಕೀಯ ತ್ಯಾಜ್ಯ ವಿಲೇವಾರಿ ಮಾಡುವ ಬೆಳಗಾವಿ ಗ್ರೀನ್ ಎನ್ವಿರಾನ್ಮೆಂಟ್ ಪ್ರೈವೆಟ್ ಲಿಮಿಟೆಡ್ ಹಾರೂಗೊಪ್ಪ, ರಿಯೋ ಗ್ರೀನ್ ಎನ್ವಿರಾನ್ ತಾರಿಹಾಳ ಹುಬ್ಬಳ್ಳಿ ಹಾಗೂ ತಾಲೂಕಾ ಆರೋಗ್ಯಾಧಿಕಾರಿಗಳು ಮುಂತಾದವರು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳು ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಿದರು ಕಳೆದ ಸಭೆಯ ನಡುವಳಿಗಳನ್ನು ಸಭೆಗೆ ತಿಳಿಸಿದರು. ನಂತರ ಜಿಲ್ಲಾ ಸಲಹೆಗಾರರಾದ ಡಾ॥ ಶೀವಲೀಲಾ. ಎಸ್. ಶಿರೋಳ ರವರು 2016 ರ ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣೆಯ ಮಾರ್ಗಸೂಚಿಯನ್ನು Power Point Presentation ಮೂಲಕ ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆಯ ಬಗ್ಗೆ ವಿವರಿಸಿದರು. ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳು ಮಾತನಾಡುತ್ತ ಜಿಲ್ಲೆಯಲ್ಲಿ 178 ಸರಕಾರಿ ಆರೋಗ್ಯ ಸಂಸ್ಥೆಗಳಿದ್ದು ಇಲ್ಲಿ ಉತ್ಪತ್ತಿಯಾದ ಜೀವ ವೈದ್ಯಕೀಯ ತ್ಯಾಜ್ಯ ವಿಲೇವಾರಿಯನ್ನು ಬೆಳಗಾವಿ ಗ್ರೀನ್ ಎನ್ವಿರಾನ್ಮೆಂಟ್ ಪ್ರೈವೆಟ್ ಲಿಮಿಟೆಡ್ ಹಾರೂಗೊಪ್ಪ ಹಾಗೂ ರಿಯೋ ಗ್ರೀನ್ ಎನ್ವಿರಾನ್ ತಾರಿಹಾಳ ಹುಬ್ಬಳ್ಳಿ ಇವರು ನಿರ್ವಹಿಸುತ್ತಿದ್ದಾರೆ. ಜಿಲ್ಲಾಮಟ್ಟದಿಂದ ನೇರವಾಗಿ ಬಿಲ್ ಪಾವತಿಸಲಾಗುತ್ತಿದೆ ಎಂದು ತಿಳಿಸಿದರು. ರಾಜ್ಯ ಮಟ್ಟದಿಂದ ಬಂದ ಮಾರ್ಗಸೂಚಿ ಪ್ರಕಾರ 7 ರೂ.ಗಳು ಪ್ರತಿ ಬೆಡ್‌ಗೆ ಅದರಂತೆ ಸಾರ್ವಜನಿಕ ಆಸ್ಪತ್ರೆ-21,292/- ರೂ.ಗಳು, ಮಹಿಳಾ(ತಾಯಿ) & ಮಕ್ಕಳ ಆಸ್ಪತ್ರೆ -21,292/- ರೂ.ಗಳು, ಸಮುದಾಯ ಆರೋಗ್ಯ ಕೇಂದ್ರಗಳು-6388/- ರೂ.ಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು-1500/- ರೂ.ಗಳು, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು -1500/- ರೂ.ಗಳು ಎಂದು ಸಭೆಗೆ ತಿಳಿಸಿದರು. ಈ ದರಕ್ಕೆ ಜೀವ ವೈದ್ಯಕೀಯ ತ್ಯಾಜ್ಯ ವಿಲೇವಾರಿ ಘಟಕದವರು ಒಪ್ಪಿಕೊಂಡು ಅದೇ ದರದಲ್ಲಿ ಸರಕಾರಿ ಆರೋಗ್ಯ ಸಂಸ್ಥೆಗಳಿಗೆ ಸೇವೆಯನ್ನು ಮುಂದುವರೆಸಲಾಗುವುದೆಂದು ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸುತ್ತಿರುವ ಬಗ್ಗೆ ವಿಚಾರಿಸಿದರು. ಅದಕ್ಕೆ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳು ಉತ್ತರಿಸುತ್ತಾ ಬಾರ್‌ಕೋಡ್ ನೀಡದೇ ಇರುವುದರ ಬಗ್ಗೆ ಹಾಗೂ ಕೆಲವೊಂದು ಆರೋಗ್ಯ ಸಂಸ್ಥೆಗಳಿಗೆ 48 ಘಂಟೆಯೊಳಗೆ ತ್ಯಾಜ್ಯ ಸಂಗ್ರಹಿಸದೆ ಇರುವುದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು. ಅದಕ್ಕೆ ಮಾನ್ಯ ಅಧ್ಯಕ್ಷರು ಬೆಳಗಾವಿ ಗ್ರೀನ್ ಎನ್ವಿರಾನ್ಮೆಂಟ್ ಪ್ರೈವೆಟ್ ಲಿಮಿಟೆಡ್ ಹಾರೂಗೊಪ್ಪ, ರಿಯೋ ಗ್ರೀನ್ ಎನ್ವಿರಾನ್ ತಾರಿಹಾಳ ಹುಬ್ಬಳ್ಳಿ

Scanned with CamScanner

ರವರಿಗೆ ಕಡ್ಡಾಯವಾಗಿ ಬಾರ್‌ಕೋಡ್ ಹಾಗೂ ಜಿ.ಪಿ.ಎಸ್ ಅಳುವಡಿಸಲು ಹಾಗೂ ಎಲ್ಲ ಆರೋಗ್ಯ ಸಂಸ್ಥೆಗಳಿಂದ 48 ಘಂಟೆಯೊಳಗೆ ತ್ಯಾಜ್ಯ ಸಂಗ್ರಹಿಸಲು ತಿಳಿಸಿದರು.

(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು ಬೆಳಗಾವಿ, ಪರಿಸರ ಅಧಿಕಾರಿಗಳು ಬೆಳಗಾವಿ ಚಿಕ್ಕೋಡಿ)

ಬೆಳಗಾವಿ ಜಿಲ್ಲೆ ವಿಸ್ತೀರ್ಣದಲ್ಲಿ ದೊಡ್ಡ ಜಿಲ್ಲೆಯಾಗಿದ್ದು, ಜಿಲ್ಲೆಯಲ್ಲಿ 178 ಸರಕಾರಿ ಆರೋಗ್ಯ ಸಂಸ್ಥೆಗಳು ಹಾಗೂ ಖಾಸಗಿ ವೈದ್ಯ ವೃತ್ತಿ ನಡೆಸುತ್ತಿರುವ ಕ್ಲಿನಿಕ್‌ಗಳು ಆಸ್ಪತ್ರೆಗಳಿದ್ದು 48 ಘಂಟೆಯೊಳಗೆ ತ್ಯಾಜ್ಯ ವಿಲೇವಾರಿ ಮಾಡುವುದು ಕಷ್ಟ ಸಾಧ್ಯವಾಗುತ್ತಿದೆ ಎಂದು ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳು ಸಭೆಗೆ ತಿಳಿಸಿದರು ಅದಕ್ಕೆ ಮಾನ್ಯ ಅಧ್ಯಕ್ಷರು ಪ್ರತಿ ತಾಲೂಕಿಗೆ ಅಥವಾ 75 ಕಿಲೋ ಮಿಟರ್ ಅಂತರದಲ್ಲಿ ಜೀವ ವೈದ್ಯಕೀಯ ತ್ಯಾಜ್ಯ ವಿಲೇವಾರಿ ಘಟಕಗಳನ್ನು ನಿರ್ಮಿಸಲು ಆಸಕ್ತರಿರುವರಿಗೆ ಪತ್ರಿಕಾ ಸುದ್ದಿ ಮುಖಾಂತರ ವರದಿ ಮಾಡಲು ಸೂಚಿಸಿದರು. ಜಿಲ್ಲೆಯಲ್ಲಿ ಜೀವ ವೈದ್ಯಕೀಯ ತ್ಯಾಜ್ಯ ವಿಲೇವಾರಿ ಸೇವೆ ನೀಡಲು ಕೈಗಾರಿಕಾ ಪ್ರದೇಶ, ಕಣಗಲಾ ತಾಲೂಕ ಹುಕ್ಕೇರಿಯಲ್ಲಿ ಭೂಮಿಯನ್ನು ಪಡೆದಿರುತ್ತಾರೆ. ಸದರಿಯವರಿಗೆ ಶೀಘ್ರದಲ್ಲಿ ಘಟಕವನ್ನು ಪ್ರಾರಂಭಿಸಲು ಕ್ರಮ ವಹಿಸಲು ಪರಿಸರ ಅಧಿಕಾರಿಗಳು ಬೆಳಗಾವಿ ಹಾಗೂ ಚಿಕ್ಕೋಡಿ ರವರಿಗೆ ಸೂಚಿಸಿದರು.

(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು ಬೆಳಗಾವಿ, ಪರಿಸರ ಅಧಿಕಾರಿಗಳು ಬೆಳಗಾವಿ ಚಿಕ್ಕೋಡಿ)

ಅಧ್ಯಕ್ಷರು, ಪ್ಯಾಸ್ ಫೌಂಡೇಶನ್ ಬೆಳಗಾವಿ ರವರು ಮಾತನಾಡಿ ಇನ್ನೂ ಹೆಚ್ಚಿನ ಜೀವ ವೈದ್ಯಕೀಯ ತ್ಯಾಜ್ಯ ವಿಲೇವಾರಿ ಘಟಕಗಳು ನಿರ್ಮಾಣಗೊಂಡರೆ ಮಹಿಳೆಯರಿಗೆ ಉದ್ಯೋಗಾವಕಾಶಗಳು ಸಿಗಬಹುದೆಂದು ಅಭಿಪ್ರಾಯ ಪಟ್ಟರು. ಉಪಯೋಗಿಸಿದ ಪ್ಲಾಸ್ಟಿಕ್‌ಗಳನ್ನು ಮರು ಬಳಕೆ ಮಾಡಿ ಕಾಂಕ್ರಿಟ್ ರಸ್ತೆಗಳನ್ನು ನಿರ್ಮಾಣ ಮಾಡುವಲ್ಲಿ ಬಳಸಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಅದಕ್ಕೆ ಮಾನ್ಯ ಅಧ್ಯಕ್ಷರು ಸಹಮತ ವ್ಯಕ್ತಪಡಿಸಿದರು. ಜೀವ ವೈದ್ಯಕೀಯ ತ್ಯಾಜ್ಯ ವಿಲೇವಾರಿ ಒಂದು ನಿರಂತರ ಕಾರ್ಯವಾಗಿದ್ದು ಅದನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದರು. ಯಾವ ಆರೋಗ್ಯ ಸಂಸ್ಥೆಗಳಲ್ಲಿ ಸರಿಯಾಗಿ ತ್ಯಾಜ್ಯವನ್ನು ನಿರ್ವಹಣೆ ಮಾಡದೇ ಇದ್ದಲ್ಲಿ ಅವರಿಗೆ ನೋಟಿಸ್, ದಂಡ ಹಾಗೂ ಮುಂತಾದ ಶಿಸ್ತು ಕ್ರಮ ಜರುಗಿಸಲು ಸೂಚಿಸಿದರು.

(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು ಬೆಳಗಾವಿ, ಎಲ್ಲ ತಾಲೂಕಾ ಆರೋಗ್ಯಾಧಿಕಾರಿಗಳು)

ವಂದನಾರ್ಪಣೆಗಳೊದಿಗೆ ಸಭೆ ಮುಕ್ತಾಯವಾಯಿತು.

Patil NK

ಅಧ್ಯಕ್ಷರು ಜೀವ ವೈದ್ಯಕೀಯ ತ್ಯಾಜ್ಯ ವಿಲೇವಾರಿ
ಸಲಹಾ ಹಾಗೂ ಮೇಲ್ವಿಚಾರಣಾ ಸಮಿತಿ
ಹಾಗೂ ಜಿಲ್ಲಾಧಿಕಾರಿಗಳು ಬೆಳಗಾವಿ

Scanned with CamScanner